ಆ. ಕೆರೆಗಾಗಿ ವಶಪಡಿಸಿಕೊಂಡಂತಹ ಪೂರ್ಣ ಸ್ಥಳವು ಸರ್ಕಾರದ ವಶದಲ್ಲಿಯೇ;

ಇ. ಕೆರೆಯ ಸ್ಥಳವನ್ನು ಅತಿಕ್ರಮಣ ಮಾಡಿಕೊಂಡು ಬೆಳೆಯನ್ನು ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ. ಬಂದಿದ್ದಲ್ಲಿ ಇದನ್ನು ತೆರವುಗೊಳಿಸಲು ಯಾವ ಕ್ರಮಗಳನ್ನು ಜರುಗಿಸಲಾಗಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ. 227.00 ಹೆಕ್ಟೇರು

ಆ. ಇದೆ

ಇ. ನೀರಿಲ್ಲದಿದ್ದಾಗ ಕೆಲವು ರೈತರು ಬೆಳೆಯನ್ನು ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಈ. ಈ ಕೆರೆಯ ಮುಳುಗಡೆ ಪ್ರದೇಶದಲ್ಲಿ ಬರುವ ಕೆರೆಯಂಗಳದಲ್ಲಿ ನೀರು ಇಲ್ಲದಿದ್ದಾಗ ಮಾತ್ರ ಈ ಕೆರೆ ಆಗಿ ಜಮೀನು ಕಳೆದುಕೊಂಡ ರೈತರು ಬೆಳೆಗಳನ್ನು ಬೆಳೆಯುತ್ತಿರುವುದು ಕಂಡುಬಂದಿದೆ. ಇದನ್ನು ತಡೆಗಟ್ಟಲು ಈ ಪ್ರದೇಶದಲ್ಲಿ ಗಿಡಗಳನ್ನು ನೆಡಲು ಪ್ರಯತ್ನಿಸಲಾಗುತ್ತಿದೆ.

1649(2177) ಶ್ರೀ ಶಿವಣ್ಣ. ಜಿ. (ರಾಣಿಬೆನ್ನೂರು): ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ.ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಣಿಬೆನ್ನೂರು ನಗರಸಭೆಗೆ ಸಂಬಂಧಪಟ್ಟಂತೆ ಆಸ್ತಿಯಾದ ಸಿಟಿಎಸ್ ನಂ.2111 ರಲ್ಲಿ ಕ್ಷೇತ್ರ 33176 ಚದರ ಅಡಿ ಕೋಟಿಗಟ್ಟಲೆ ಕಿಮ್ಮತ್ತು ಬಾಳುವಂತೆ ಬಿಲ್ಡಿಂಗ್ ಸಮೇತ ಇರುವಂತಾದ್ದು ಯಾರ ವಶದಲ್ಲಿದೆ ಏಕೆ;

2. ಪಿ.ಪಿ. ಆ್ಯಕ್ಟ್ ಕೆಳಗೆ ವಶಪಡಿಸಿಕೊಳ್ಳಲು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರ ನಂ. ಪೌನಿ ಎಂಎಸ್‌ಸಿ 31.93-94, ದಿನಾಂಕ : 31-5-1993 ರಲ್ಲಿ ಆದೇಶವಾಗಿದ್ದರೂ ಕೂಡ ಇಲ್ಲಿಯವರೆಗಾದ್ರೂ ನಗರಸಭೆಯವರು ತಮ್ಮ ತಾಬಾಕ್ಕೆ ವಶಪಡಿಸಿಕೊಂಡಿರುವುದಿಲ್ಲ ಇದಕ್ಕೆ ಕಾರಣವೇನು;

3. ಯಾವ ಕರಾರಿನ ಮೇಲೆ ದಿನಾಂಕ :19-1-1972ರಲ್ಲಿ ಸಿಟಿಎಸ್ ನಂ ; 2111ರಲ್ಲಿ ಕ್ಷೇತ್ರ 33176 ಚದರ ಅಡಿ ಬಿಲ್ಡಿಂಗ್ ಸಮೇತ ಜಾಗವನ್ನು ಪುಕ್ಕಟೆಯಾಗಿ ಲೀಜ್ ಮೇಲೆ ನಗರಸಭೆಯವರು ಯಾರಿಗೆ ಕೊಟ್ಟಿರುತ್ತಾರೆ ;

4. ಅಂದು ಸಂಸ್ಥೆಯ ಅಧ್ಯಕ್ಷ ಹಾಗೂ ಕಾರ್ಯದರ್ಶಿ ಯಾರು ;

5. ಹಾಲಿ ಅಧ್ಯಕ್ಷ ಕಾರ್ಯದರ್ಶಿಗಳು ಯಾರು?

ಶ್ರೀ ಎಸ್. ಆರ್.ಮೋರೆ (ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು):

1. ರಾಣಿಬೆನ್ನೂರು ತಾಲ್ಲೂಕು ಎಜ್ಯುಕೇಷನ್ ಸೊಸೈಟಿ, ರಾಣಿಬೆನ್ನೂರು ಇವರ ವಶದಲ್ಲಿದೆ. ಶೈಕ್ಷಣಿಕ ಉದ್ದೇಶಕ್ಕಾಗಿ ನೀಡಿರುತ್ತದೆ.

2. ಪಿ.ಪಿ. ಆಕ್ಟ್ ಪ್ರಕಾರ ವಶಪಡಿಸಿಕೊಳ್ಳುವ ನಗರಸಭೆ ಕ್ರಮವನ್ನು ಪ್ರಶ್ನಿಸಿ ಧಾರವಾಡ ನ್ಯಾಯಾಲಯದಲ್ಲಿ ಪ್ರಕರಣವು ನಡೆದು ಧಾರವಾಡ ಜಿಲ್ಲಾ ನ್ಯಾಯಾಲಯದಲ್ಲಿ ನಗರಸಭೆಯು ಕ್ರಮವನ್ನು ಕಾನೂನು ಬಾಹಿರವೆಂದು ನಿರ್ಣಯಿಸಿ ರದ್ದುಪಡಿಸಲಾಗಿದೆ. ಈ ಕಾರಣದಿಂದ ನಗರಸಭೆಯು ತಾಬಾಕ್ಕೆ ವಶಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ.

3. ಶೈಕ್ಷಣಿಕ ಉದ್ದೇಶಕ್ಕೆ ಮಾತ್ರ ಬಳಸುವ ಕರಾರಿನ ಮೇಲೆ ರಾಣಿಬೆನ್ನೂರು ತಾಲ್ಲೂಕು ಎಜ್ಯುಕೇಷನ್ ಸೊಸೈಟಿ, ರಾಣಿಬೆನ್ನೂರು ಇವರಿಗೆ ಪುಕ್ಕಟೆಯಾಗಿ ಲೀಜ್ ಮೇಲೆ ಕೊಟ್ಟಿರುತ್ತದೆ.

4. ಅಧ್ಯಕ್ಷರು : ಶ್ರೀ ವಿ.ಕೆ. ಸಾಹುಕಾರ್,
ಕಾರ್ಯದರ್ಶಿ : ಶ್ರೀ ಕೆ.ಬಿ. ಕೋಳಿವಾಡ.

5. ಅಧ್ಯಕ್ಷರು : ಶ್ರೀ ವಿ.ಕೆ.ಸಾಹುಕಾರ್,
ಕಾರ್ಯದರ್ಶಿ : ಶ್ರೀ ಕೆ, ಬಿ, ಕೋಳಿವಾಡ.

1650 (2024) ಶ್ರೀ ಸಿಂಧೂರ ಜಿ. ರಾಜಶೇಖರ (ಶಿಗ್ಗಾಂವ್) ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಸವಣೂರು ನಗರದಲ್ಲಿ ದಿನಾಂಕ : 29.04.2000 ರಂದು ನೀರಿಗಾಗಿ ಉಪವಾಸ ಸತ್ಯಾಗ್ರಹ ಕೈಗೊಂಡ ಸಂದರ್ಭದಲ್ಲಿ, ಅಮಾಯಕರನ್ನು ನಿರಪರಾಧಿ ಹಾಗೂ ಬಡ ನಾಗರಿಕರನ್ನು ಬಂಧಿಸಿ ಅವರ ಮೇಲೆ 6 ಪ್ರಕರಣಗಳನ್ನು ದಾಖಲಿಸಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ. ಈಗಾಗಲೇ ಈ ಪ್ರಕರಣ ನಾಲ್ಕು ವರ್ಷಗಳಿಂದ ನ್ಯಾಯಾಲಯದಲ್ಲಿ ನಡೆದಿದ್ದು, ಇತ್ತೀಚೆಗೆ ಈ 6 ಪ್ರಕರಣಗಳು ಸವಣೂರ ನ್ಯಾಯಾಲಯದಿಂದ ಹಾವೇರಿ ಜಿಲ್ಲಾ ಸತ್ರ ನ್ಯಾಯಾಲಯದಲ್ಲಿ ಪ್ರಕರಣಗಳು ಮುಂದುವರೆದಿದ್ದು, ಇದರಿಂದ ಅಮಾಯಕರಿಗೆ ಆರ್ಥಿಕವಾಗಿ ಹಾಗೂ ಮಾನಸಿಕವಾಗಿ ಸಾಕಷ್ಟು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ. ಹಾಗಿದ್ದಲ್ಲಿ ಸರ್ಕಾರವು ಈ ಪ್ರಕರಣಗಳನ್ನು ವಾಪಸ್ಸು ಪಡೆದುಕೊಳ್ಳಲು ಏನಾದರು ಕ್ರಮಗಳನ್ನು ಕೈಗೊಂಡಿದೆಯೆ?

ಈ. ಹಾಗಿದ್ದಲ್ಲಿ ಈ ಮೊಕದ್ದಮೆಗಳನ್ನು ವಾಪಸ್ಸು ಪಡೆಯಲು ಸರ್ಕಾರ ತೀವ್ರಗತಿಯಲ್ಲಿ ಕ್ರಮ ಕೈಗೊಳ್ಳುತ್ತಿದೆಯೆ?

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಗಳು) :

ಅ. ಬಂದಿದೆ.

ಆ. ಬಂದಿದೆ.

ಇ. ಸದರಿ ಮೊಕದ್ದಮೆಗಳಲ್ಲಿ ಆರೋಪಿತರು ಲಕ್ಷಾಂತರ ರೂಪಾಯಿ ನಷ್ಟವುಂಟು ಮಾಡಿದ್ದು ಬೆಂಕಿಯ ಅನಾಹುತ, ಕೊಲೆಯತ್ನ ಇತ್ಯಾದಿ ಜೀವಾವಧಿ ಶಿಕ್ಷೆಗೆ ಒಳಪಡುವ ಅಪರಾಧಗಳನ್ನು ಎಸಗಿರುವುದರಿಂದ ಹಿಂತೆಗೆದುಕೊಳ್ಳಬಾರದೆಂದು ನಿರ್ಣಯಿಸಲಾಗಿದೆ.

1651(2025) ಶ್ರೀ. ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸಣ್ಣ ಉಳಿತಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಶಿಗ್ಗಾಂವ – ಸವಣೂರ ತಾಲ್ಲೂಕಿನ ಶಾಲೆಗಳಲ್ಲಿ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದಂತೆ ಸಲಕರಣೆಗಳು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ, ಈ ಮತಕ್ಷೇತ್ರದಲ್ಲಿ ಎರಡು ತಾಲ್ಲೂಕು ಗಳಿದ್ದು, ಸಾಕಷ್ಟು ಶಾಲೆಗಳಲ್ಲಿ ವಿಜ್ಞಾನ ಸಲಕರಣೆಗಳು ಇಲ್ಲದೇ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದ್ದು, ಇದಕ್ಕೆ ಹೆಚ್ಚಿನ ಅನುದಾನ ಬಿಡುಗಡೆಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆ?

ಇ. ಹಾಗಿದ್ದಲ್ಲಿ, ಎಷ್ಟು ಕಾಲಾವಕಾಶದಲ್ಲಿ ಅನುದಾನ ಬಿಡುಗಡೆಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆ?

ಶ್ರೀ ಬಸವರಾಜ್ .ಎಸ್. ಹೊರಟ್ಟಿ (ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸಣ್ಣ ಉಳಿತಾಯ ಸಚಿವರು):

ಅ. ಬಂದಿರುವುದಿಲ್ಲ.